

ಅಡುಗೆ ಮನೆಯ ಕಡೆ ಸುಳಿಯುವ ಮೊದಲೇ. ಈ ಅಜ್ಜಿ ಮಾತು ಕೇಳಿದ ಮೇಲೆ ಬಾಯಿ ತೊಳೆಯದೇ ಇರುವುದದರೂ ಹೇಗೆ ಹೇಳಿ.

ಜೀವನದಲ್ಲಿ ಏನನ್ನಾದರೂ ಕಳೆದುಕೊಂಡಾಗಲೇ ಆ ಸರಕಿನ ಬೆಲೆ ಗೊತ್ತಾಗುವುದು. ಇದನ್ನು ಬಾಯೊಳಗಿನ ಹಲ್ಲುಗಳಿಗೂ ಅನ್ವಯಿಸಬಹುದು. ಬಾಲ್ಯದಲ್ಲಿ ಅವುಗಳ ಕಡೆಗೆ ಗಮನವೇ ಇರದು. ಹಲ್ಲು ಬಿದ್ದು ಹೋಗಿ ಬೆನ್ನು ಬಾಗಿ ಮಕ್ಕಳ ಹಂಗಿಗೆ ಬೀಳುವ ಮುನ್ನ, ಹಳ್ಳಿಗಳಲ್ಲಿ ಕಟ್ಟೆಯ ಮೇಲೆ ಅಸಹಾಯಕರಾಗಿ ಕೂತಿರುತ್ತಿದ್ದ ವಯಸ್ಸಾದವರು, 'ನನಗ ಇನ್ನೂ ಅವನಿಂದ ಕರೆ ಬರವಲ್ಲದು, ನೋಡಪಾ' ಎಂದು ಬಿಸುಸುಯ್ಯುತ್ತಿದ್ದರು. ನಾವೆಲ್ಲ 'ಯಾರಿಂದ ಕರೆ ಬರಬೇಕು? ಎಲ್ಲಿದ್ದಾನವ ಹೇಳು ಅವನ ವಿಳಾಸ. ನಾವೇ ಹೋಗಿ ಲೆಟರ್ ತಗಂಡು ಹೋಗಿ ಕರಕಂಡು ಬರತೀವಿ' ಅಂದು ಕಿಚಾಯಿಸಿ ನಗಾಡುತ್ತಿದ್ದೆವು. ಹಣ್ಣೆಲೆಯ ಪಕ್ಕದಲ್ಲಿಯೇ ಚಿಗುರೆಲೆ ನಳನಳಿಸುವಂತೆ ನಮ್ಮ ನಗು.

ನಮ್ಮ ಬಾಲ್ಯ ಕಾಲದ ದಿನಗಳನ್ನು ಮೆಲುಕು